ಇ) ಪ್ರತಿ ವರ್ಷ 1000 ಗ್ರಾಮಗಳನ್ನು ಆಯ್ಕೆ ಮಾಡುವ ಉದ್ದೇಶವಿದ್ದು, ಮುಂದಿನ ವರ್ಷಗಳಲ್ಲಿ ಇವುಗಳನ್ನು ಸಹ ಅಭಿವೃದ್ಧಿಗಾಗಿ ಆಯ್ಕೆ ಮಾಡುವ ಸಂಭವವಿರುತ್ತದೆ

1010 (1042) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2005–2006ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗೆ ಎಷ್ಟು ಹಣ ಒದಗಿಸಲಾಗಿದೆ,

ಆ) ಒದಗಿಸಿದ್ದಲ್ಲಿ, ಹೊಸನಗರ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ,

ಇ) ಈ ಕಾಮಗಾರಿಗಳಿಗೆ ಒದಗಿಸಲಾದ ಹಣವೆಷ್ಟು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) 2005–06ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ರೂ 2963 26 ಲಕ್ಷಗಳನ್ನು ಒದಗಿಸಲಾಗಿದೆ ವಿವರಗಳು ಈ ಕೆಳಕಂಡಂತಿವೆ

(ರೂ ಲಕ್ಷಗಳಲ್ಲಿ)

1	ತುಂಗಾ ಮೇಲ್ದಂಡೆ ಯೋಜನೆ	ರೂ 2201 94
2	ಭದ್ರಾ ಆಧುನೀಕರಣ	ರೂ 530 15
3	ಗೊಂದಿ ನಾಲಾ ಆಧುನೀಕರಣ	ರೂ 28 95
4	ತುಂಗಾ ನಾಲಾ ಆಧುನೀಕರಣ	ರೂ 86 78
5	ಅಂಜನಾಪುರ ನಾಲಾ ಆಧುನೀಕರಣ	ರೂ 85 05
6	ಅಂಬ್ಲಿಗೋಳ ನಾಲಾ ಆಧುನೀಕರಣ	ರೂ 30 39

ಆ) ಹೊಸನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

1) ತುಂಗಾ ಮೇಲ್ದಂಡೆ ಯೋಜನೆ ಅಣೆಕಟ್ಟು ಮತ್ತು ತತ್ಸಂಬಂಧಿ ಕಾಮಗಾರಿಗಳು ಹಾಗೂ ಮುಖ್ಯ ಕಾಲುವೆ ಕಿ ಮೀ 0 ರಿಂದ 44ರವರೆಗಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

2) ಭದ್ರಾ ಯೋಜನೆ ಅಡಿಯಲ್ಲಿ

1 ಭದ್ರಾ ಎಡದಂಡೆ ನಾಲೆಯ 27ನೇ ವಿತರಣಾ ನಾಲೆಯ ಹೆಡ್ ಸ್ಲೂಯಿಸ್ ಮನರ್ ನಿರ್ಮಾಣ

2 ಭದ್ರಾ ಎಡದಂಡೆ ನಾಲೆಯ 27ನೇ ವಿತರಣಾ ನಾಲೆಯ ಅಭಿವೃದ್ಧಿ ಕಾಮಗಾರಿ

3 ತುಂಗಾ ಯೋಜನೆ ಅಡಿಯಲ್ಲಿ

- ತುಂಗಾ ಎಡದಂಡೆ ನಾಲೆಯ ಕಿ ಮೀ 25 30, 25 60 ಮತ್ತು 26 10ರಲ್ಲಿರುವ ಡಿಸ್ಟ್ರಿಬ್ಯೂಟರಿಗಳ ಹೆಡ್ ಸ್ಲೂಯಿಸ್‌ಗಳ ರಿಲೀವಿಂಗ್ ವಿಯರ್‌ಗಳ ಅಭಿವೃದ್ಧಿ
- ತುಂಗಾ ಎಡದಂಡೆ ನಾಲೆಯ ಡಿಸ್ಟ್ರಿಬ್ಯೂಟರಿ 26 ಮತ್ತು 27ಗಳ ಹೆಡ್ ಸ್ಲೂಯಿಸ್‌ಗಳ ಮತ್ತು ಕಿ ಮೀ 36 30, 38 20 ರಲ್ಲಿರುವ ಇನ್‌ಲೆಟ್‌ಗಳ ಅಭಿವೃದ್ಧಿ
- ತುಂಗಾ ಎಡದಂಡೆ ನಾಲೆಯ ಡಿಸ್ಟ್ರಿಬ್ಯೂಟರಿ ಸಂ 21ಎ ಅಭಿವೃದ್ಧಿ

ಇ) ಈ ಕಾಮಗಾರಿಗಳಿಗಾಗಿ ರೂ 2236 02 ಲಕ್ಷಗಳನ್ನು ಒದಗಿಸಲಾಗಿದೆ

1011 (1043) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಹೊಸನಗರ ವಿಧಾನ ಕ್ಷೇತ್ರಾಭಿವೃದ್ಧಿಯಲ್ಲಿ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಿಗೆ ಒದಗಿಸಲಾಗಿರುವ ಕಂಪ್ಯೂಟರ್‌ಗಳ ಸಂಖ್ಯೆ ಎಷ್ಟು,

ಆ) ಮುಂದಿನ ವರ್ಷದಲ್ಲಿ ಶಾಲೆಗಳಿಗೆ ಕಂಪ್ಯೂಟರ್ ಒದಗಿಸುವ ಗುರಿ ಹೊಂದಲಾಗಿದೆಯೇ,

ಇ) ಕಂಪ್ಯೂಟರ್ ಶಿಕ್ಷಣ ನೀಡಲು ಶಿಕ್ಷಕರನ್ನು ನೇಮಿಸಲಾಗಿದೆಯೇ,

ಈ) ಇಲ್ಲದಿದ್ದಲ್ಲಿ, ಕಂಪ್ಯೂಟರ್ ಶಿಕ್ಷಕರನ್ನು ಯಾವಾಗ ನೇಮಿಸಲಾಗುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೊಸನಗರದಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾಹಿತಿ ಸಿಂಧು ಯೋಜನೆಯಡಿಯಲ್ಲಿ 05 ಸರ್ಕಾರಿ ಪ್ರೌಢ